ಮೇಲೆ ಕಾಮನಬಿಲ್ಲುಗಳಂತೆ ಬಾಗಿದ್ದವು. ಘನವಾದ ಕಣ್ಣೆವೆಗಳ ಮೇಲೆ ಒತ್ತಾದ ರೆಪ್ಪೆಗಳಿದ್ದವು. ಎಲ್ಲಕ್ಕಿಂತ ಮೋಹಕವಾದ ಅಂಗವೆಂದರೆ ಅವಳ ತುಟಿಗಳು, ಸಾಧಾರಣವಾಗಿ ಲಿಪ್‌ಸ್ಟಿಕ್ ಬಳಿದುಕೊಂಡಿರುತ್ತಿದ್ದವು, ಮೇಲ್ದುಟಿಗಳ ಮೇಲೆ ವಿರಳವಾದ ಕೂದಲುಗಳಿದ್ದವು. ತಲೆಯ ಉದ್ದನೆಯ ಕೂದಲುಗಳು ಕದಪುಗಳನ್ನು ಆವರಿಸುತ್ತಿದ್ದವು. ಅವಳನ್ನೇ ನಿಟ್ಟಿಸಿ ನೋಡಿದಾಗ ನನಗೆ ಒಮ್ಮೊಮ್ಮೆ ಅವಳ ಮುಖದ ಆಕಾರ ಬದಲಿಸಿದಂತೆಯೂ, ಒಬ್ಬ ಎಳೇ ಯುವಕನ ಮುಖದಂತೆಯೂ ಕಾಣಿಸುತಿತ್ತು.

ಅವಳ ಬೆಳ್ಳಗಿನ ನುಣುಪಾದ ತ್ವಚೆ ಮೈಮೇಲೆ ಬಿಗಿಯಾಗಿಟ್ಟು ಹೊಲಿದಂತೆಯೇ ಕಾಣಿಸುತ್ತಿತ್ತು ಅವಳು ಮಸಾಜಿಗೆ ಕಾಲು ನೀಡಿದಾಗ ನಾನು ಕಳ್ಳನೋಟದಿಂದ ಅವುಗಳ ಹೊಳಪನ್ನು ಮಂತ್ರಮುಗ್ಧಳಾಗಿ ನೋಡುತ್ತಿದ್ದೆ. ಎತ್ತರದ ನಿಲುವು ಹಾಗೂ ಒಳ್ಳೆಯ ಮೈಕಟ್ಟು ಅವಳ ರೂಪಿಗೆ ರಾಜಗಾಂಭೀರ್ಯ ಮತ್ತು ಭವ್ಯತೆ ನೀಡಿದ್ದವು. ಅವಳ ಕೈಗಳು ವಿಶಾಲ ಮತ್ತು ನುಣುಪಾಗಿದ್ದು, ನಡು ನಾಜೂಕಾಗಿತ್ತು. ರಬ್ಬು ಅವಳ ಬೆನ್ನನ್ನು ಗಂಟೆಗಟ್ಟಲೆ ತಿಕ್ಕುತ್ತಿದ್ದಳು. ಮಸಾಜ್ ಎಂದರೆ ಜೀವನದ ಒಂದು ಮೂಲಭೂತ ಅಗತ್ಯವೋ ಅಥವಾ ಜೀವನದ ಅಗತ್ಯಗಳಿಗಿಂತಲೂ ಹೆಚ್ಚು ಮುಖ್ಯವಾದದ್ದೇನೋ ಇರಬೇಕು ಎನ್ನುವಂತೆ.

ರಬ್ಬುಗೆ ಬೇರೆ ಯಾವ ಮನೆ ಕೆಲಸದ ಜವಾಬ್ದಾರಿ ಇರಲಿಲ್ಲ. ಸೋಫಾದ ಮೇಲೆ ಕೂತು ಬೇಗಮ್ ಜಾನಳ ಯಾವುದಾದರೊಂದು ಅಂಗವನ್ನು ಮಸಾಜ್ ಮಾಡುತ್ತಲೇ ಇರುತ್ತಿದ್ದಳು. ಕೆಲವೊಮ್ಮೆ ನನಗೆ ಅದನ್ನು ನೋಡುವುದೇ ಕಷ್ಟವಾಗುತ್ತಿತ್ತು. ರಬ್ಬು ಯಾವಾಗಲೂ ಮಸಾಜ್ ಮಾಡುತ್ತಲೇ ಇರುತ್ತಿದ್ದಳು. ನನ್ನ ಬಗ್ಗೆಯೇ ಹೇಳುವುದಾದರೆ ಯಾರಾದರೂ ನನ್ನನ್ನು ಅಷ್ಟು ಸಲ ಮುಟ್ಟಿದರೆ ನಾನು ಸತ್ತೇ ಹೋಗುತ್ತಿದ್ದೆ.

ಆದರೆ, ಇಂತಹ ಮಸಾಜ್ ಕೂಡ ಸಾಕಾಗುತ್ತಿರಲಿಲ್ಲ. ಬೇಗಂ ಜಾನ್ ಸ್ನಾನ ಮಾಡುವ ದಿನ ಅವಳ ಮೈಯನ್ನು ಬಗೆಬಗೆಯ ಎಣ್ಣೆ ಮತ್ತು ಲೇಪಗಳಿಂದ ಪೂಸಿ ಎರಡು ಗಂಟೆ ಕಾಲ ಮಜ್ಜನ ನಡೆಯುತಿತ್ತು. ಅವಳು ಅಷ್ಟು ತ್ರಾಣ ಹಾಕಿ ಮರ್ದಿಸುವುದನ್ನು ಊಹಿಸುವಾಗಲೇ ನನಗೆ ಸಂಕಟವಾಗುತ್ತಿತ್ತು. ಬಾಗಿಲುಗಳನ್ನು ಮುಚ್ಚಲಾಗುತ್ತಿತ್ತು, ಒಳಗಡೆ ದೀಪಗಳನ್ನು ಹಚ್ಚಿ ಗಂಟೆಗಟ್ಟಲೆ ಮಸಾಜ್ ನಡೆಯುತ್ತಿತ್ತು. ಇಂತಹ ಸಂದರ್ಭಗಳಲ್ಲಿ ರಬ್ಬುಗೆ ಮಾತ್ರ ಒಳಗಿರುವ ಅನುಮತಿ ಇರುತ್ತಿತ್ತು. ಉಳಿದ ಕೆಲಸದವರು ಅಗತ್ಯಬಿದ್ದ ಸಾಮಾನುಗಳನ್ನು ಒಲ್ಲದ ಮನದಿಂದ ಗೊಣಗುತ್ತಲೇ ತಂದುಕೊಡುತ್ತಿದ್ದರು.

ನಿಜಕ್ಕೂ ಬೇಗಮ್ ಜಾನ್‌ಳಿಗೆ ಯಾವಾಗಲೂ ತುರಿಕೆ ಇರುತ್ತಿತ್ತು. ಎಣ್ಣೆ ಮತ್ತು ಲೇಪಗಳಿಂದಲೂ ಹೋಗಲಾರದಂತಹ ತುರಿಕೆ. ವೈದ್ಯರು ಮತ್ತು ಹಕೀಮರು ಅವಳು ಚೆನ್ನಾಗಿಯೇ ಇದ್ದಾಳೆಂದು ಘೋಷಿಸಿದ್ದರು. ತ್ವಚೆಯು ಕಳಂಕರಹಿತವಾಗಿತ್ತು. ಚರ್ಮದ ಒಳಗಡೆ ಸೋಂಕು ಇರಬಹುದೇನೋ ಎಂದಿದ್ದರು. “ಈ ವೈದ್ಯರಿಗೆ ಮರುಳು, ನಿನಗೇನೂ ಆಗಿಲ್ಲ” ರಬ್ಬು ನಗುತ್ತಾ ಬೇಗಮ್ ಜಾನ್‌ಳನ್ನು ಕನಸಿನ ಲೋಕದಲ್ಲಿರುವವಳಂತೆ ನೋಡುತ್ತಾ ಹೇಳುತ್ತಿದ್ದಳು.

ಬೇಗಂ ಜಾನ್ ಎಷ್ಟು ಬೆಳ್ಳಗಿದ್ದಳೋ ರಬ್ಬು ಅಷ್ಟೇ ಕಪ್ಪು. ನೇರಳೆ ಬಣ್ಣದಷ್ಟು ಕಪ್ಪು, ಕಾದ ಕಬ್ಬಿಣದಂತೆ ಹೊಳೆಯುತ್ತಿದ್ದಳು. ಮುಖದ ಮೇಲೆ ಸಿಡುಬಿನ ಕಲೆಗಳು. ಕುಳ್ಳಗೆ, ದಪ್ಪಗಿದ್ದವಳಿಗೆ ಸಣ್ಣ ಡೊಳ್ಳು ಹೊಟ್ಟೆಯಿದ್ದಿತು. ಚುರುಕಾಗಿದ್ದ ಚಿಕ್ಕ ಕೈಗಳು ಯಾವಾಗಲೂ ಒದ್ದೆಯಾಗಿರುತ್ತಿದ್ದ ದಪ್ಪನೆಯ ತುಟಿಗಳು. ಅವಳ ಮೈಯಿಂದ ವಿಚಿತ್ರ ಅಸಹನೀಯ ವಾಸನೆ ಹೊರ ಸೂಸುತ್ತಿತ್ತು. ಅವಳ ಚಿಕ್ಕನೆಯ ಉಬ್ಬಿದ ಕೈಗಳು ಬೇಗಮ್ ಜಾನ್‌ಳ ಮೈಮೇಲೆ ಬಿಡುವಿಲ್ಲದಂತೆ ಓಡಾಡುತ್ತಲೇ ಇದ್ದವು—ಈಗ ನಡುವಿನ ಮೇಲೆ, ಈಗ ತೊಡೆಗಳ ಮೇಲೆ ಮತ್ತೆ ಅಂಗಾಲುಗಳ ಕಡೆ ನಾನು ಬೇಗಮ್ ಜಾನ್‌ಳ ಬಳಿ ಕೂತಿದ್ದಾಗ ಆ ಕೈಗಳ ಮೇಲೆಯೇ ನನ್ನ ದೃಷ್ಟಿ ಕೀಲಿಸಿರುತ್ತಿತ್ತು.

ವರ್ಷದುದ್ದಕ್ಕೂ ಬೇಗಮ್ ಜಾನ್ ಬೆಳ್ಳಗಿನ ಅಗಲವಾದ ಹೈದರಾಬಾದ್ ಜಾಲಿ ಕಸೂತಿ ಕೆಲಸ ಮಾಡಿದ ಕುರ್ತಾ ಹಾಗೂ ಢಾಳಾದ ಬಣ್ಣದ